**ಓ ಎಸ್ ನಂ. 04/2016**
**ಪಿ ಡಬ್ಲ್ಯೂ : 1**

**ದಿಃ 19.11.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಲ್.ಬಿ. ವಕೀಲರಿಂದಃ**

1. ದಾವೆಯನ್ನು ಟೈಪಿಸ್ಟ್ ಶ್ರೀನಿವಾಸ ಮೂರ್ತಿ ಬರೆಯಿಸಿರುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನನ್ನ ತಂದೆ ಪಿ.ಡಬ್ಲ್ಯೂ.ಡಿ.ಯಲ್ಲಿ ಕ್ಲಾಸ್-1 ಕಾಂಟ್ರಕ್ಟರ್ ಆಗಿದ್ದರು ಎಂದರೆ ಸರಿ. ನನ್ನ ತಂದೆ 2010 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ನಾವು 4 ಜನ ಮಕ್ಕಳು ಎಂದರೆ ಸರಿ. ನಾನು ಮತ್ತು ಪ್ರತಿವಾದಿ, ನಾಗರಾಜ, ವಿಜಯ ಕುಮಾರ್ ಎಂದರೆ ಸರಿ. ನನ್ನ ತಂದೆಗೆ ಒಬ್ಬಳೇ ಹೆಣ್ಣು ಮಗಳು ಮಂಜುಳ, ಸದರಿಯವರು ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ಬಾಗೂರು ಗ್ರಾಮದ ರಿ.ಸ. ನಂಃ 58/2 ರಲ್ಲಿ 11 ಎಕರೆ 35 ಗುಂಟೆ ಇತ್ತು ಎಂದರೆ ಸರಿ. ನಾವು ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ನನ್ನ ತಂದೆ ಇರುವಾಗಲೇ ನಾವು ಪ್ರತ್ಯೇಕ ಮನೆ ಮಾಡಿಕೊಂಡು ವಾಸವಾಗಿದ್ದೇವು. ನಾವು ನಾಲ್ಕು ಜನ ಬೇರೆ ಬೇರೆ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ಪ್ರತಿವಾದಿ ನನ್ನ ಅಣ್ಣ ಎಂದರೆ ಸರಿ. ಪ್ರತಿವಾದಿ ಸಿವಿಲ್ ಇಂಜಿನಿಯರ್ ಎಂದರೆ ಸರಿ. ಪ್ರತಿವಾದಿ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ರಿ.ಸ. ನಂಃ 13/1 ಬಿ5 ರಲ್ಲಿ ಪ್ರತಿವಾದಿ ಮತ್ತು ಇತರರು ಜಂಟಿಯಾಗಿ 38 ಗುಂಟೆ ಜಮೀನನ್ನು ಖರೀದಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿ ಪ್ರತಿವಾದಿ ಮತ್ತು ಇತರರ ಜಂಟಿ ಸ್ವಾಧೀನದಲ್ಲಿ ದಿಃ 03.12.2007 ರ ವರೆಗೆ ಇತ್ತು ಎಂದರೆ ಸರಿ. ನನಗೆ ಸದರಿ ಆಸ್ತಿಯ ಚೆಕ್ಕು ಬಂದಿ ಗೊತ್ತಿಲ್ಲ.

3. ದಿಃ 03.12.2007 ರಂದು ಪ್ರತಿವಾದಿ ದಾವಾ ಆಸ್ತಿಯನ್ನು ಹಕ್ಕು ಖುಲಾಸೆ ಮೂಲಕ ಪಡೆದರು ಎಂದರೆ ಸರಿಯಲ್ಲ. ಪ್ರತಿವಾದಿ ಹಕ್ಕು ಖುಲಾಸೆ ಮೂಲಕ ಪಡೆದ ಆಸ್ತಿಯ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯೊಂದಿಗೆ ದಾವಾ ಆಸ್ತಿಯ ಕುರಿತು ಒಡಂಬಡಿಕೆ ಮಾಡಿಕೊಂಡಾಗ ಅದು ಜಂಟಿ ಖಾತೆಯಾಗಿತ್ತು. ಉಳಿದ ಜಂಟಿ ಖಾತೆದಾರರ ಸಹಿಯನ್ನು ಖರೀದಿ ಖರಾರು ಪತ್ರಕ್ಕೆ ನಾನು

ಪಡೆದುಕೊಂಡಲ್ಲ. ನಾನು ಖರೀದಿ ಕರಾರು ಪತ್ರ ಮಾಡಿಕೊಂಡಾಗ ದಾವಾ ಆಸ್ತಿ ಜಂಟಿ ಸ್ವಾಧೀನದಲ್ಲಿತ್ತು. ದಿಃ 27.03.2001 ರಲ್ಲಿ ಪ್ರತಿವಾದಿ ನನ್ನಿಂದ 15 ಸಾವಿರ ಕೈಗಡ ಸಾಲ ಪಡೆದರು ಎಂದರೆ ಸರಿ. ಆ ಸಮಯದಲ್ಲ ಪ್ರತಿವಾದಿ ನಿಪಿ-01 ರ ಖಾಲಿ ಹಾಳೆಯ ಮೇಲೆ ಸಹಿ ಮಾಡಿ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಿಃ 04.01.2012 ರಲ್ಲಿ ಪ್ರತಿವಾದಿ 70 ಸಾವಿರ ಹಣವನ್ನು 15 ಸಾವಿರ ಅಸಲು ಸೇರಿಸಿ ಬಡ್ಡಿಯೊಂದಿಗೆ ನನ್ನ ಖಾತೆಗೆ ಜಮಾ ಮಾಡಿರುತ್ತಾರೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ಕಾಲಾವಕಾಶ ನೀಡಿ, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .